ಸಿ ಸಿ ನಂ. 790/2017

<u>ಸಾಕ್ಷಿಗೆ ದಿನಾಂಕ 12-07-2023 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 1 P.W.: 1

| | | |
|---|---|---|
| ಹೆಸರು | : | ರೇಣುಕಮ್ಮ |
| ಗಂಡನ ಹೆಸರು | : | ಸೊಬಟಿ ಕೊಟ್ರಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಕೂಲಿ |
| ವಾಸ ಸ್ಥಳ | : | ಬನ್ನಿಕಲ್ಲು |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ಆರೋಪಿಯು ನನ್ನ ಗಂಡನಾಗಿರುತ್ತಾನೆ. ಚಾಸಾ-7 ನನಗೆ ಅಣ್ಣನಾಗಬೇಕು. ಚಾಸಾ-6 ನನ್ನ ತಂದೆಯಾಗಬೇಕು.

ನನ್ನ ಮದುವೆಯು ಮೋರಿಗೇರಿಯ ತಾತನ ಮಠದಲ್ಲಿ ಆಗಿದ್ದು, ನನಗೆ ಮದುವೆಯಾಗಿ 18 ವರ್ಷಗಳಾಗಿದ್ದು ನಿಖರವಾಗಿ ದಿನಾಂಕವನ್ನು ಹೇಳಲು ಆಗುವುದಿಲ್ಲ. ನನ್ನ ಮದುವೆಯ ಕಾಲಕ್ಕೆ ನಾನು ನನ್ನ ಗಂಡನಾಗದ ಆರೋಪಿತನಿಗೆ ವರದಕ್ಷಿಣೆಯಾಗಿ ರೂ. 50 ಸಾವಿರ ನಗದು ಹಣವನ್ನು, ಬಂಗಾರವನ್ನು ಕೊಟ್ಟಿರುತ್ತೇವೆ. ನನಗೆ ಒಬ್ಬ ಮಗಳಿದ್ದು, ನಾನು ಮದುವೆಯಾದ ನಂತರ 7 ವರ್ಷಗಳವರೆಗೆ ನನ್ನ ಗಂಡನ ಮನೆ ಇರುವ ಬನ್ನಿಕಲ್ಲು ಗ್ರಾಮದಲ್ಲಿ ವಾಸವಿದ್ದು ಆ ಸಮಯದಲ್ಲಿ ಹೊಡೆಯುವುದು , ಕುಡಿದು ಬಂದು ಅವಾಚ್ಯ ಶಬ್ದಗಳಿಂದ ಬೈಯುವುದು ಮತ್ತು ನನ್ನನ್ನು ಬೇರೆ ಗಂಡುಮಕ್ಕಳೊಂದಿಗೆ ಹೋಲಿಸುವುದನ್ನು ಮಾಡುತ್ತಿದ್ದು ಹಿಂಸೆಯನ್ನು ತಾಳಲಾರದೆ ನಾನು ನನ್ನ ಗಂಡನ ವಿರುದ್ಧ ನನ್ನ ಮದುವೆಯ ಲಗ್ನಪತ್ರಿಕೆ ಹಾಗೂ ಇತರೆ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿ ಪೊಲೀಸ್ ಠಾಣೆಯಲ್ಲಿ ಹೋಗಿ ದೂರು ಕೊಟ್ಟಿದ್ದು ಪೋಲಿಸರು ನನ್ನ ದೂರನ್ನು ತೆಗೆದುಕೊಂಡಿರುತ್ತಾರೆ.

ಆ ನಂತರ ನಾನು ಶ್ರೀ ಜಾಣ ಶಿವಾನಂದ ವಕೀಲರ ಬಳಿ ಹೋಗಿದ್ದೆ. ಆ ನಂತರ ವಕೀಲರು ತಂಬ್ರಹಳ್ಳಿ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದರು, ನಾನು ನನ್ನ ಗಂಡನ ವಿರುದ್ಧ ದೂರನ್ನು ಕೊಡಲು ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಪೋಲೀಸರು ನನ್ನ ಗಂಡನ

ಮನೆಗೆ ಬಂದಿದ್ದು ಪಂಚನಾಮೆಯನ್ನು ಮಾಡುವ ಕಾಲಕ್ಕೆ ನಾನು ನನ್ನ ಮದುವೆಯ ಪೋಟೋ ಮತ್ತು ನನ್ನ ಮದುವೆಯ ಲಗ್ನಪತ್ರಿಕೆಯನ್ನು ಪೋಲೀಸರಿಗೆ ಕೊಟ್ಟಿರುತ್ತೇನೆ. ಆ ನಂತರ ನಾನು ನನ್ನ ತವರುಮನೆಗೆ ಹೋದೆ.

ಸಾಕ್ಷಿಯು ಖಾಸಗೀ ಪಿರ್ಯಾದನ್ನು ಹಾಗೂ ಅದರಲ್ಲಿರುವ ಆಕೆಯ ಹೆಬ್ಬೆಟ್ಟಿನ ಸಹಿಯನ್ನು ನೋಡಿ ಗುರುತಿಸಿದ್ದು, ಖಾಸಗೀ ಪಿರ್ಯಾದನ್ನು ನಿಪಿ-1 ಎಂದು, ಪಂಚನಾಮೆಯನ್ನು ನಿಪಿ-2 ಎಂದು, ನಕ್ಷೆಯನ್ನು ನಿಪಿ-3 ಎಂದು, ಜಪ್ತು ಪಂಚನಾಮೆಯನ್ನು ನಿಪಿ-4 ಎಂದು, ಜಪ್ತು ಪಂಚನಾಮೆ ಕಾಲಕ್ಕೆ ತೆಗೆದಂತಹ ಪೋಟೋವನ್ನು ನಿಪಿ-5 ಎಂದು, ಹೇಳಿಕೆಯನ್ನು ನಿಪಿ-6 ಎಂದು, ಮದುವೆಯ ಲಗ್ನಪತ್ರಿಕೆಯನ್ನು ನಿಪಿ-7 ಎಂದು, 3 ಪೋಟೋಗಳನ್ನು ಕ್ರಮವಾಗಿ ನಿಪಿ8 ರಿಂದ 10 ಎಂದು ಗುರುತಿಸಲಾಯಿತು.

ಪಾಟೀ ಸವಾಲು. ಆರೋಪಿ ಪರ ಶ್ರೀ ಎನ್ ಜಿ ಬಿ ವಕೀಲರಿಂದಃ-

ಚಾಸಾ-2 ನನ್ನ ಅಣ್ಣನಾಗಬೇಕು ಎಂದರೆ ಸರಿ. ಚಾಸಾ-3 ನನ್ನ ಮಾವನಾಗಬೇಕು ಎಂದರೆ ಸರಿ. ಚಾಸಾ-4 ಮಾಜೀ ಗ್ರಾಮ ಪಂಚಾಯ್ತಿ ಅಧ್ಯಕ್ಷರೆಂದರೆ ಸರಿ.

ನಾನು ಮೂಲತಃ ಬನ್ನಿಕಲ್ಲು ವಾಸಿಯಾಗಿರುತ್ತೇನೆ. ಆರೋಪಿಯಾದ ನನ್ನ ಗಂಡನ ಊರು ಕೂಡಾ ಬನ್ನಿಕಲ್ಲು ಆಗಿರುತ್ತದೆ. ನನ್ನ ಗಂಡ ಮೂಲತಃ ಸೊಬಟಿ ಗ್ರಾಮದವರು ಎಂದರೆ ಸರಿ. ನನ್ನ ಗಂಡ ಆರೋಪಿಯು ಬನ್ನಿಕಲ್ಲು ಗ್ರಾಮಕ್ಕೆ ಬಂದು ಸುಮಾರು 60 ವರ್ಷಗಳಾಗಿರುತ್ತದೆ. ಆರೋಪಿಯು ಆತನ ಮಾವನಾದ ಭೀಮಜ್ಜನ ಮನೆಯಲ್ಲಿದ್ದರು. ಆರೋಪಿಯು ಚೌಟಗಿ ಭೀಮಜ್ಜನ ಮನೆಗೆ ಮನೆ ಅಳಿಯನಾಗಿ ಬಂದಿದ್ದರು ಎಂದರೆ ಸರಿ. ಆರೋಪಿಯು ಚೌಟಗಿ ಭೀಮಜ್ಜನ ಮಗಳನ್ನು ವಿವಾಹ ಮಾಡಿಕೊಂಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನನ್ನು ಕೂಡಾ ಮದುವೆಯಾಗಿದ್ದರೆಂದು ನುಡಿಯುತ್ತಾರೆ. ಆರೋಪಿ

ಮತ್ತು ಆಕೆಯ ಹೆಂಡತಿ ಹುಲಿಗೆಮ್ಮಳಿಗೆ 3 ಜನ ಮಕ್ಕಳಿರುತ್ತಾರೆಂದರೆ ಸರಿ. ಆ ಮಕ್ಕಳಿಗೆ ಮದುವೆಯಾಗಿರುತ್ತದೆಂದರೆ ಸರಿ.

2016 ನೇ ಸಾಲಿನವರೆಗೂ ನನ್ನ ಹಾಗೂ ಆರೋಪಿಯ ನಡುವೆ ಜಗಳವಾಗಿರುವ ಬಗ್ಗೆಯಾಗಲೀ ಅಥವಾ ಆರೋಪಿಯು ನನಗೆ ಹೊಡೆಬಡಿ ಮಾಡಿರುವ ಬಗ್ಗೆಯಾಗಲೀ ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುವ ಬಗ್ಗೆ ಗೊತ್ತಿರುವುದಿಲ್ಲ. ಆರೋಪಿಯು ನನ್ನ ಜೊತೆ ಗಲಾಟೆ ಮಾಡಿಲ್ಲವೆಂದರೆ ಸರಿಯಲ್ಲ. ನಾನು ಆರೋಪಿತನಿಗೆ ನನ್ನ ಜೊತೆ ಬಂದು ಬಾಳುವೆ ನಡೆಸುವಂತೆ ದಿಃ 01-04-2016, 25-04-2016 ರಂದು ವಕೀಲರ ಮೂಲಕ ನೋಟೀಸನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನಾನು ಆರೋಪಿತನಿಗೆ ರೂ.50 ಸಾವಿರ ನಗದು ಹಣವನ್ನು ಹಾಗೂ ಬಂಗಾರವನ್ನು ಕೊಟ್ಟಿರುವುದಿಲ್ಲವೆಂದರೆ ಸರಿಯಲ್ಲ. ನಾನು ಆರೋಪಿತನಿಗೆ ರೂ.50 ಸಾವಿರ ನಗದುಹಣವನ್ನು ವರದಕ್ಷಿಣೆಯಾಗಿ ಕೊಟ್ಟಿರುವ ಬಗ್ಗೆ ಹಾಗೂ ಬಂಗಾರ ಕೊಟ್ಟಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲವೆಂದರೆ ಸರಿ. ಕೃತ್ಯಸ್ಥಳದಲ್ಲಿ ಕೃತ್ಯಸ್ಥಳ ಪಂಚನಾಮೆ ಹಾಗೂ ಜಪ್ತುಪಂಚನಾಮೆಯನ್ನು ಮಾಡಿರುವುದಿಲ್ಲವೆಂದರೆ ಸರಿಯಲ್ಲ. ಈ ಪಿರ್ಯಾದಿಗೆ ಸಂಬಂಧಿಸಿದಂತೆ ನಾನು ಒಟ್ಟು ಎಷ್ಟು ಸಹಿ ಮಾಡಿರುತ್ತೇನೆಂದು ಹೇಳಲಾಗುವುದಿಲ್ಲ ಆದರೆ ಪ್ರತಿಯೊಂದು ಹಾಳೆಗೂ ಸಹಿಯನ್ನು ಮಾಡಿರುತ್ತೇನೆ. ನನಗೂ ಮತ್ತು ಆರೋಪಿತನಿಗೂ ಗಂಡ ಹೆಂಡತಿಯ ಸಂಬಂಧವಿರುವುದಿಲ್ಲವೆಂದರೆ ಸರಿಯಲ್ಲ.

ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೇಳಿದರು, ನೀಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ